ಆತ ಬಹಳ ಹೊತ್ತು ಉಸಿರುಗಟ್ಟಿಸುವ ಆ ಬೆಡ್‌ರೂಮಿನಲ್ಲಿ ಇರಲಾಗದೇ ಹೊರಬಂದು ಹಾಲಿನ ಸೋಫಾದ ಮೇಲೆ ಕೂತ. ಶಮಿ ಇಲ್ಲಿಯವರೆಗೂ ನೋಡಿದ್ದು ಕನಸಲ್ಲವೆನ್ನುವುದಕ್ಕೆ ಸಾಕ್ಷಿಯಾಗಿ ಆ ಬ್ರೀಫ್‌ಕೇಸ್ ಹಾಸಿಗೆಯ ಮೇಲಿತ್ತು. ಯಾರೋ ಒಬ್ಬಳು ಬರಲಿದ್ದಾಳೆ ಎಂಬ ತನ್ನ ಕಲ್ಪನೆಗೆ ಸಣ್ಣನಗುವೊಂದು ಮೊಳಕೆಯೊಡೆಯಿತು. ಅದರ ಹಿಂದೆಯೇ, ಕಾರ್ಲಿತೋ ಸೆಕ್ಸ್ ಮತ್ತು ಸಾವು ಅಸಹನೀಯ ಒಂಟಿತನದಿಂದ ಹೊರಬರುವ ಎರಡು ದಾರಿಗಳು ಎಂದಿದ್ದು, ಈ ಆತ್ಮಹತ್ಯಾ ಪ್ರಯತ್ನ ನಿಯತಕಾಲಿಕವೇ ಇರಬಹುದು ಎನ್ನುವ ಸಂಶಯ ಬಂದು ಆ ನಗು ಕರಟಿಹೋಯಿತು. ಉಸಿರುಗಟ್ಟಿಸುತ್ತಿದ್ದ ಕ್ಲಾಸೆಟ್ಟಿನಿಂದ ಹೊರಬರಲು ಶಮಿ ಸಿದ್ಧನಾಗತೊಡಗುವಷ್ಟರಲ್ಲಿ ಕಾರ್ಲಿತೋ ಶಮಿಯ ಕಿವಿಯಲ್ಲಿ ಗೊಣಗುತ್ತಿದ್ದ:

"ಇದಕ್ಕೇ ನೋಡು, ನಿನ್ನನ್ನು ಮೂರ್ಖ ಎನ್ನುವುದು. ಒಮ್ಮೆ ಆತ್ಮಹತ್ಯೆಗೆ ಪ್ರಯತ್ನಿಸಿದವರು ಸುಮ್ಮನಿರುತ್ತಾರೆಯೇ? ಮತ್ತೆ ಮತ್ತೆ ಪ್ರಯತ್ನಿಸುತ್ತಾರೆ. ಸಾಯುವ ಮೊದಲು ನೀನು ಸಿಕ್ಕರೆ ನಿನ್ನನ್ನು ಸುಮ್ಮನೆ ಬಿಡುತ್ತಾನೆಯೇ? ಅದಕ್ಕಿಂತಲೂ ಮೊದಲು ನೀನೇ... ಎಲ್ಲವವನ್ನೂ ನಾನೇ ಹೇಳಬೇಕೇನು? ಅವನದೇ ಆಸೆ, ಅವನದೇ ಗನ್. ಸಾಯಲು ಬಂದ ಅವನಿಗೆ ಬದುಕಲು ಬಂದ ನೀನು ಯಾಕೆ ಸಹಾಯ ಮಾಡಬಾರದು? ಆಯ್ಕೆ ನಿನ್ನದು, ನಾಳೆ ನಾನು ಹೇಳಿಲ್ಲ ಅಂತ ಆಗಬಾರದು ಅಷ್ಟೆ."

ಇನ್ನೂ ಹಾಸಿಗೆಯ ಮೇಲಿದ್ದ ಗನ್ ತಣ್ಣಗೆ ಕೊರೆಯುತ್ತಿತ್ತು, ಕರೆಯುತ್ತಿತ್ತು. ಮುಂದಿನ ದಾರಿ ಅಸ್ಪಷ್ಟವಾಗಿತ್ತು.

## 8

ಮಿರುಗುವ ಆ ರಿವಾಲ್ವರಿನಿಂದ ಪೂರ್ತಿ ಖಾಲಿಯಾಗುವವರೆಗೂ ಹೊರಟ ಗುಂಡುಗಳು ವಿಸ್ಪರಿಂಗ್ ಸ್ಟ್ರೀಮ್ಸ್‌ನಲ್ಲಿ ಹರಡಿದ್ದ ಉರಿಬೇಸಗೆ ರಾತ್ರಿಯ ಶಾಂತಿಯನ್ನು ಕೆಲವು ಕ್ಷಣಗಳ ಮಟ್ಟಿಗೆ ಕದಡಿದವು. ರಿವಾಲ್ವರಿನಿಂದ ಗುಂಡು ಹೊರಬಿದ್ದ ಮೂರುವರೆ ನಿಮಿಷದ ನಂತರ ಪೊಲೀಸರೊಡನೆ ಬಂದ ಎಮರ್ಜೆನ್ಸಿ ವಾಹನ ರಕ್ತಸಿಕ್ತ ಶಮಿಯ ಪಾರ್ಥಿವ ಶರೀರವನ್ನು ಎತ್ತೊಯ್ದಿತು. ಇಡೀ ಪ್ರಕರಣಕ್ಕೆ ಏಕೈಕ ಸಾಕ್ಷಿಯಾಗಿದ್ದ ಕಾರ್ಲಿತೋ ಇನ್ನಿಲ್ಲದಂತೆ ಅದೃಶ್ಯನಾಗಿದ್ದ. ವಿಸ್ಪರಿಂಗ್ ಸ್ಟ್ರೀಮ್ಸ್ ಮಗ್ಗಲು ಬದಲಿಸಿ ಮತ್ತೊಮ್ಮೆ ಸುಖನಿದ್ದೆಯಲ್ಲಿ ಲೀನವಾಯಿತು.

## ಪ್ರಕಾಶ ನಾಯಕ

ವೃತ್ತಿಯಿಂದ ಎಲೆಕ್ಟ್ರಾನಿಕ್ ಎಂಜಿನಿಯರ್ ಆಗಿರುವ ಪ್ರಕಾಶ ನಾಯಕ ಪ್ರಸ್ತುತ ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಕುಪರ್ಟಿನೋ ಎಂಬ ಪುಟ್ಟ ನಗರದಲ್ಲಿ ವಾಸವಾಗಿದ್ದಾರೆ. ಹುಟ್ಟಿದೂರು ಉತ್ತರ ಕನ್ನಡದ ಹನೇಹಳ್ಳಿ. ಪ್ರಾಥಮಿಕ ಶಿಕ್ಷಣ ಪಡೆದಿದ್ದು ಅಂಕೋಲೆಯ ಅಗ್ರಗೋಣದಲ್ಲಿ. ನಂತರದ ವಿದ್ಯಾಭ್ಯಾಸ ಕಾರವಾರ, ಅಂಕೋಲೆ, ಭಟ್ಕಳ, ಚೆನ್ನೈಗಳಲ್ಲಿ. ಲೇಖಕರ ಪ್ರಕಟಿತ ಕಥಾಸಂಗ್ರಹ 'ಅಮೂರ್ತ ಚಿತ್ರ'.